<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.357/2017. . P.W.-1.**

ದಿನಾಂಕ:**07.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲು:</u> 1 ರಿಂದ 3 ನೇ ಪ್ರತಿವಾದಿಯರ ಪರ ಶ್ರೀ ಎಂ ಎನ್ ವಕೀಲರಿಂದ:-

ನನ್ನ ತಂದೆಗೆ 9 ಜನ ಮಕ್ಕಳು. ನಮಗೆ ಮನೆ ಬೇಕು ಎಂದು ಧಿವಾಕರ್ ರವರು ಹೇಳಿ ನನ್ನ ಮೂಲಕ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನ ತಂದೆ ಸೋಮಯ್ಯ ರವರಿಗೆ 3 ಎಕರೆ ನಿರಾವರಿ ಜಮೀನು, ಮನೆ ಇತ್ತು. ಸದರಿ 3 ಎಕರೆ ಜಮೀನನ್ನು ಈ ದಾವೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ 3 ಎಕರೆ ಜಮೀನಿನಲ್ಲಿ ನನ್ನ ಮಾವ ಮಾರಾಟ ಮಾಡಿ 1 ½ ಎಕರೆ ಮಾತ್ರ ಉಳಿದಿದೆ ಎಂದು ನುಡಿಯುತ್ತಾರೆ. ಸದರಿ ಉಳಿದ 1 ½ ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ಅದು ಬೇರೆ ಜಮೀನು ಈ ಸ್ವತ್ತು ಬೇರೆ ಆಗಿರುತ್ತದೆ. ಜಮೀನನ್ನು ಮಾರಾಟ ಮಾಡುವಾಗ ನನ್ನ ಗಂಡ ಜೀವಂತವಿದ್ದರು, ಆದರೆ ಅವರು ಬೀದರ್ ನಲ್ಲಿ ಇದ್ದರು, ಆಸ್ತಿ ಮಾರಾಟ ಮಾಡಿದ ಅವರಿಗೆ ಗೊತ್ತಾಗಿರುವುದಿಲ್ಲ. ನಾವು

ಬೀದರ್ ನಿಂದ ಇಲ್ಲಿಗೆ ಬಂದ ನಂತರ 3 ಎಕರೆ ಜಮೀನನ್ನು ಮಾರಾಟ ಮಾಡಲಾಗಿದೆ ಎಂದು ನಮಗೆ ಯಾರು ಸಹಃ ಹೇಳಿರುವುದಿಲ್ಲ, ಇತ್ತೀಚೆಗೆ ಗೊತ್ತಾಗಿರುತ್ತದೆ. ಸದರಿ 3 ಎಕರೆ ಜಮೀನು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ.

ದಾವಾ ಸ್ವತ್ತು ನನ್ನ ಮಾವನಾದ ಸೋಮಯ್ಯ ರವರ ಹೆಸರಿನಲ್ಲಿ ಇತ್ತು. ನಾನು ಈ ದಾವೆಯಲ್ಲಿ ಸೋಮಯ್ಯರವರ ಹೆಸರಿನಲ್ಲಿ ಇದ್ದ ಮನೆಯಲ್ಲಿ ಮಾತ್ರ ಪಾಲು ಕೇಳುತ್ತಿದ್ದೇನೆ ಎಂದರೆ ಸರಿ. ಧಿವಾಕರ್ ರವರ ಹೆಸರಿನಲ್ಲಿ ಎಷ್ಟು ಮನೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಧಿವಾಕರ್ ರವರು ಸ್ವಾಧೀನದಲ್ಲಿ ಇರುವ ಎಲ್ಲಾ ಮನೆಗಳು ಧಿವಾಕರ್ ರವರ ಹೆಸರಿನಲ್ಲಿಯೇ ಇದೆ ಎಂದರೆ ಆ ಬಗ್ಗೆ ನೋಡಿ ಹೇಳಬೇಕು.

ದಾವಾ ಸ್ವತ್ತು ಮಂಜುನಾಥ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಮಾವನ ಆಸ್ತಿ ಎಂದು ತೋರಿಸಲು ನಾನು ಯಾವುದೇ ದಾಖಲೆ ಪಡೆದುಕೊಂಡಿಲ್ಲ. ನನ್ನ ಗಂಡ ಅರಣ್ಯ ರಕ್ಷಕನಾಗಿದ್ದರು. ನನ್ನ ಗಂಡ ಯಾವುದೇ ಆಸ್ತಿ ಮಾಡಿಟ್ಟಿರುವುದಿಲ್ಲ. ನನ್ನ ಗಂಡನು 1 ನೇ ಪ್ರತಿವಾದಿಯ ಗಂಡನಿಗೆ ಹಣಕಾಸಿನ ಸಹಾಯ ಮಾಡಿರುವುದಿಲ್ಲ. ದಾವಾ ಸ್ವತ್ತಿನ ಮೇಲೆ ಮಂಜುನಾಥರವರನ್ನು ಹೊರತು ಪಡಿಸಿ ಬೇರೆಯವರಿಗೆ ಹಕ್ಕು-ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಏನೇನು ದಾಖಲೆ ಹಾಜರುಪಡಿಸಿರುತ್ತೇನೆ ಎಂದು ನನಗೆ ಮಾಹಿತಿ ಇಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.